# ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ
## ಅಫಜಲಪೂರ

ಸಿಸಿ ನಂ.196/2014

ಚಾಸಾ-20 ಪ್ರಾಸಾ-5

ಸತ್ಯ ಪ್ರತಿಜ್ಞೆಯ ಮೇರೆಗೆ ಪ್ರಮಾಣಿಕೃತ
ಹೇಳಿಕೆ ಪಡೆದುಕೊಳ್ಳಲಾಯಿತು
ದಿನಾಂಕಃ 18.11.2019

| | | |
|---|---|---|
| ಹೆಸರು | ಃ | ಮಂಜುನಾಥ ಸಿಲವೇರಿ |
| ತಂದೆ ಹೆಸರು | ಃ | ನಾರಾಯಣಪ್ಪ |
| ವಯಸ್ಸು | ಃ | 34-ವರ್ಷ |
| ಉದ್ಯೋಗ | ಃ | ಪಿಐ |
| ವಾಸಸ್ಥಳ | ಃ | ಬೀದರ |

ಮುಖ್ಯ ವಿಚಾರಣೆಃ ಎಪಿಪಿ ಯವರಿಂದ

ಡಿಸೆಂಬರ್-2010 ರಿಂದ ಸೆಪ್ಟೆಂಬರ 2013 ರವರೆಗೆ ಅಫಜಲಪೂರ ಪೋಲಿಸ್ ಠಾಣೆಯಲ್ಲಿ ಪಿ ಎಸ್ ಐ ಎಂದು ಕರ್ತವ್ಯ ನಿರ್ವಹಿಸುತ್ತಿದ್ದೇನೆ. ದಿನಾಂಕ 16.01.2012 ರಂದು ಪ್ರಕರಣದ ಕಡತವನ್ನು ಚಾಸಾ-18 ರವರಿಂದ ವಹಿಸಿಕೊಂಡು ಕಡತವನ್ನು ಪರಿಶೀಲಿಸಿ ದಿನಾಂಕ 17.01.2012 ರಂದು ಪ್ರಕರಣದಲ್ಲಿ ಭಾಗಿಯಾದ ವಾಹನ ನಂ.ಕೆಎ-25/ಬಿ-2247 ನ್ನು ಹುಬ್ಬಳ್ಳಿ ಕಾರವರ ರಸ್ತೆಯಲ್ಲಿರುವ ಭಾರತ ಮಿಲ್ಸ್ ಪೇ ಆಂಡ್ ಪಾರ್ಕಿಂಗ ಲಾಟ್ ನಲ್ಲಿ ಸದರಿ ಲಾರಿಯ ನಿಜವಾದ ನಂ.ಕೆಎ-31/ಎ-4328 ನ್ನು ಅಳವಡಿಸಿ ಕೃತ್ಯಕ್ಕೆ ಬಳಸಿದ ನಂ.ಕೆಎ-25/ಬಿ-2247 ನೆದ್ದರ ನಂಬರ ಪ್ಲೇಟನ್ನು ಕ್ಯಾಬಿನನಲ್ಲಿಟ್ಟಿದ್ದು ಅದನ್ನು ಚಾಸಾ-5 ಮತ್ತು 6 ರವರ ಸಮಕ್ಷಮ ಜಪ್ತಿಪಡಿಸಿಕೊಂಡಿರುತ್ತೇನೆ. ಸಾಕ್ಷಿ ಪಂಚನಾಮೆಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-4, 4 ಎ ಎಂದು ಗುರುತಿಸಲಾಯಿತು.

ದಿನಾಂಕ 18.01.2012 ರಂದು ಖಚಿತ ಬಾತ್ಮಿ ಮೇರೆಗೆ ದೇವರ ಹಿಪ್ಪರಗಿಯ ಮಲ್ಲಯ್ಯನ ಗುಡಿಯ ಹತ್ತಿರ ಸದರಿ ಪ್ರಕರಣದ ಆರೋಪಿತರಿದ್ದ ಬಗ್ಗೆ ಮಾಹಿತಿ ಮೇರೆಗೆ ಅವರನ್ನು ವಶಕ್ಕೆ ಪಡೆದು ವಿಚಾರಣೆಗೊಳಪಡಿಸಿ ಸದರಿ ದೇವಸ್ಥಾದ ಆವರಣದಲ್ಲಿದ್ದ

ಕೃತ್ಯಕ್ಕೆ ಬಳಸಿದ ಮತ್ತೊಂದು ಲಾರಿ ನಂ.ಕೆಎ-28/ಎ-7587 ನ್ನು ಚಾಸಾ-12 ರವರು ತೋರಿಸಿಕೊಟ್ಟ ವಾಹನವನ್ನು ಚಾಸಾ-5 ಮತ್ತು 6 ರವರ ಸಮಕ್ಷಮ ಪಂಚನಾಮೆ ಮೂಲಕ ಜಪ್ತಿಪಡಿಸಿಕೊಂಡಿರುತ್ತೇನೆ. ಸಾಕ್ಷಿ ಪಂಚನಾಮೆ ಮತ್ತು ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-5, 5ಎ ಎಂದು ಗುರುತಿಸಲಾಯಿತು. ಸಾಕ್ಷಿ ಸದರಿ ವಾಹನದ ಛಾವಚಿತ್ರವನ್ನು ನೋಡಿ ಗುರುತಿಸಿದ್ದು ನಿಪಿ-6 ಎಂದು ಗುರುತಿಸಲಾಯಿತು. ನಂತರ ಅದೇ ದಿವಸ ಬೆಳಿಗ್ಗೆ 9 ರಿಂದ 11 ಗಂಟೆವರೆಗೆ ಚಾಸಾ-14 ರವರು ತೋರಿಸಿದ 360 ಸಕ್ಕರೆ ತುಂಬಿದ ಚೀಲಗಳನ್ನು ಅವರ ಅಂಗಡಿಯಿಂದ ಚಾಸಾ-5 ಮತ್ತು 6 ರವರ ಸಮಕ್ಷಮ ಜಪ್ತಿಪಡಿಸಿಕೊಂಡಿರುತ್ತೇನೆ. ಸಾಕ್ಷಿ ಪಂಚನಾಮೆ ಹಾಗೂ ಸಹಿಯನ್ನು ನೋಡಿ ಗುರುತಿಸಿದ್ದು ನಿಪಿ-7, 7ಎ ಎಂದು ಗುರುತಿಸಲಾಯಿತು. ಸದರಿ ಸಕ್ಕರೆ ಚೀಲಗಳನ್ನು ನ್ಯಾಯಾಲದ ಅನುಮತಿ ಮೇರೆಗೆ ನಮ್ಮ ವಶದಲ್ಲಿಟ್ಟುಕೊಂಡಿದ್ದು ನಂತರ ನ್ಯಾಯಾಲಯದ ಆದೇಶದ ಮೇರೆಗೆ ಪಿರ್ಯಾದಿಯ ವಶಕ್ಕೆ ನೀಡಿರುತ್ತೇನೆ.

ಅದೇ ದಿವಸ ಚಾಸಾ-11 ರಿಂದ 16 ರವರ ಹೇಳಿಕೆಗಳನ್ನು ಪಡೆದಿರುತ್ತೇನೆ. ನಂತರ ಆರೋಪಿತರನ್ನು ಹಾಗೂ ಮುದ್ದೆಮಾಲನ್ನು ಠಾಣೆಗೆ ಹಾಜರುಪಡಿಸಿ ಆರೋಪಿತರ ಸ್ವ ಖುಷಿ ಹೇಳಿಕೆ ಪಡೆದು ನಂತರ ಆರೋಪಿತರನ್ನು ನ್ಯಾಯಾಂಗ ಬಂಧನಕ್ಕೆ ಕಳುಹಿಸಿಕೊಟ್ಟಿರುತ್ತೇನೆ. ಸಾಕ್ಷಿ ಸ್ವ ಖುಷಿ ಹೇಳಿಕೆಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ-8 ರಿಂದ 10, ಸಹಿಂನನ್ನು ನಿಪಿ-8ಎ ರಿಂದ 10ಎ ಎಂದು ಗುರುತಿಸಲಾಯಿತು. ದಿನಾಂಕ 22.03.2011 ರಂದು ಚಾಸಾ-17 ರವರ ಹೇಳಿಕೆ ಪಡೆದಿರುತ್ತೇನೆ. ದಿನಾಂಕ 20.05.2011 ರಂದು ಚಾಸಾ-20 ರವರು ಲಾರಿ ಮಾಲಿಕತ್ವದ ಬಗ್ಗೆ ವರದಿ ನೀಡಿದ್ದು ಸಾಕ್ಷಿ ಸದರಿ ವರದಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-11, 11ಎ ಎಂದು ಗುರುತಿಸಲಾಯಿತು. ಸದರಿ ವಾಹನಗಳ ಸಂಬಂಧಪಟ್ಟ ದಾಖಲೆಗಳು ಮತ್ತು ಶುಗರ ಪ್ಯಾಕ್ಟರಿಯಿಂದ ಡೆಲಿವರಿಯಾದ ಬಗ್ಗೆ ದಾಖಲೆ ಪಡೆದಿರುತ್ತೇನೆ. ಸಾಕ್ಷಿ ಸದರಿ ದಾಖಲೆಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ-12 ರಿಂದ 17 ಎಂದು ಗುರುತಿಸಲಾಯಿತು. ದಿನಾಂಕ 06.11.2011 ರಂದು ತನಿಖೆಯನ್ನು ಪೂರ್ಣಗೊಳಿಸಿ ಆರೋಪಿತರ ವಿರುದ್ಧ ದೋ.ಪ. ಸಲ್ಲಿಸಿರುತ್ತೇನೆ.

ಪಾಟಿ ಸವಾಲುಃ ಆರೋಪಿ ಪರ ಶ್ರೀ ಎಸ್ ಎಸ್ ಪಿ ವಕೀಲರಿಂದ

ದಿನಾಂಕ 16.01.2012 ರಂದು ಪ್ರಕರಣದ ಕಡತವನ್ನು ಚಾಸಾ-18 ರವರಿಂದ ವಹಿಸಿಕೊಂಡು ಕಡತವನ್ನು ಪರಿಶೀಲಿಸಿ ದಿನಾಂಕ 17.01.2012 ರಂದು ಪ್ರಕರಣದಲ್ಲಿ ಭಾಗಿಯಾದ ವಾಹನ ನಂ.ಕೆಎ-25/ಬಿ-2247 ನ್ನು ಹುಬ್ಬಳ್ಳಿ ಕಾರವರ ರಸ್ತೆಯಲ್ಲಿರುವ ಭಾರತ ಮಿಲ್ಸಿ ಪೇ ಆಂಡ್ ಪಾರ್ಕಿಂಗ ಲಾಟ್ ನಲ್ಲಿ ಸದರಿ ಲಾರಿಯ ನಿಜವಾದ ನಂ.ಕೆಎ-31/ಎ-4328 ನ್ನು ಅಳವಡಿಸಿ ಕೃತ್ಯಕ್ಕೆ ಬಳಸಿದ ನಂ.ಕೆಎ-25/ಬಿ-2247 ನೆದ್ದರ ನಂಬರ ಪ್ಲೇಟನ್ನು ಕ್ಯಾಬಿನನಲ್ಲಿಟ್ಟಿದ್ದು ಅದನ್ನು ಚಾಸಾ-5 ಮತ್ತು 6 ರವರ ಸಮಕ್ಷಮ ಜಪ್ತಿಪಡಿಸಿಕೊಂಡಿರುತ್ತೇನೆ ಎಂದು ಸುಳ್ಳು ಹೇಳುತ್ತಿರುವೆ ಎಂದರೆ ಸರಿಯಲ್ಲ.

ದಿನಾಂಕ 18.01.2012 ರಂದು ಖಚಿತ ಬಾತ್ಮಿ ಮೇರೆಗೆ ದೇವರ ಹಿಪ್ಪರಗಿಯ ಮಲ್ಲಯ್ಯನ ಗುಡಿಯ ಹತ್ತಿರ ಸದರಿ ಪ್ರಕರಣದ ಆರೋಪಿತರಿದ್ದ ಬಗ್ಗೆ ಮಾಹಿತಿ ಮೇರೆಗೆ ಅವರನ್ನು ವಶಕ್ಕೆ ಪಡೆದು ವಿಚಾರಣೆಗೊಳಪಡಿಸಿ ಸದರಿ ದೇವಸ್ಥಾದ ಆವರಣದಲ್ಲಿದ್ದ ಕೃತ್ಯಕ್ಕೆ ಬಳಸಿದ ಮತ್ತೊಂದು ಲಾರಿ ನಂ.ಕೆಎ-28/ಎ-7587 ನ್ನು ಚಾಸಾ-12 ರವರು ತೊರಿಸಿಕೊಟ್ಟ ವಾಹನವನ್ನು ಚಾಸಾ-5 ಮತ್ತು 6 ರವರ ಸಮಕ್ಷಮ ಪಂಚನಾಮೆ ಮೂಲಕ ಜಪ್ತಿಪಡಿಸಿಕೊಂಡು ನಂತರ ಅದೇ ದಿವಸ ಬೆಳಿಗ್ಗೆ 9 ರಿಂದ 11 ಗಂಟೆವರೆಗೆ ಚಾಸಾ-14 ರವರು ತೋರಿಸಿದ 360 ಸಕ್ಕರೆ ತುಂಬಿದ ಚೀಲಗಳನ್ನು ಅವರ ಅಂಗಡಿಯಿಂದ ಚಾಸಾ-5 ಮತ್ತು 6 ರವರ ಸಮಕ್ಷಮ ಜಪ್ತಿಪಡಿಸಿಕೊಂಡು ಸದರಿ ಸಕ್ಕರೆ ಚೀಲಗಳನ್ನು ನ್ಯಾಯಾಲದ ಅನುಮತಿ ಮೇರೆಗೆ ನಮ್ಮ ವಶದಲ್ಲಿಟ್ಟುಕೊಂಡಿದ್ದು ನಂತರ ನ್ಯಾಯಾಲಯದ ಆದೇಶದ ಮೇರೆಗೆ ಪಿರ್ಯಾದಿಯ ವಶಕ್ಕೆ ನೀಡಿರುತ್ತೇನೆ ಎಂದು ಸುಳ್ಳು ಹೇಳುತ್ತಿರುವೆ ಎಂದರೆ ಸರಿಯಲ್ಲ.

ಅದೇ ದಿವಸ ಚಾಸಾ-11 ರಿಂದ 16 ರವರ ಹೇಳಿಕೆಗಳನ್ನು ಪಡೆದು ಆರೋಪಿತರನ್ನು ಹಾಗೂ ಮುದ್ದೆಮಾಲನ್ನು ಠಾಣೆಗೆ ಹಾಜರುಪಡಿಸಿ ಆರೋಪಿತರ ಸ್ವ ಖುಷಿ ಹೇಳಿಕೆ ಪಡೆದು ನಂತರ ಆರೋಪಿತರನ್ನು ನ್ಯಾಯಾಂಗ ಬಂಧನಕ್ಕೆ ಕಳುಹಿಸಿ ದಿನಾಂಕ 22.03.2011 ರಂದು ಚಾಸಾ-17 ರವರ ಹೇಳಿಕೆ ಪಡೆದು, ದಿನಾಂಕ 20.05.2011 ರಂದು ಚಾಸಾ-20 ರವರು ಲಾರಿ ಮಾಲಿಕತ್ವದ ಬಗ್ಗೆ ವರದಿ ಪಡೆದು ಸದರಿ ವಾಹನಗಳ ಸಂಬಂಧಪಟ್ಟ ದಾಖಲೆಗಳು ಮತ್ತು ಶುಗರ ಫ್ಯಾಕ್ಟರಿಯಿಂದ ಡೆಲಿವರಿಯಾದ ಬಗ್ಗೆ ದಾಖಲೆ ಪಡೆದು ದಿನಾಂಕ 06.11.2011 ರಂದು ತನಿಖೆಯನ್ನು ಪೂರ್ಣಗೊಳಿಸಿ ಆರೋಪಿತರ ವಿರುದ್ಧ ದೋ.ಪ. ಸಲ್ಲಿಸಿರುತ್ತೇನೆ ಎಂದು ಸುಳ್ಳು

ಹೇಳುತ್ತಿರುವೆ ಎಂದರೆ ಸರಿಯಲ್ಲ. ಆರೋಪಿತರು ಯಾವುದೇ ತಪ್ಪು ಮಾಡದಿದ್ದರೂ ಸಹ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷಿ ಹೇಳುತ್ತಿರುವೆ ಎಂದರೆ ಸರಿಯಲ್ಲ.

ಮರು ವಿಚಾರಣೆ: ಇಲ್ಲ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೆ ಸರಿ ಇದೆ

ಪ್ರ.ದ.ನ್ಯಾ. ದಂಡಾಧಿಕಾರಿಗಳು
ಅಫಜಲಪೂರ

# ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ
# ಅಫಜಲಪೂರ

ಸಿಸಿ ನಂ.196/2014

ಚಾಸಾ-19 ಪ್ರಾಸಾ-6

ಸತ್ಯ ಪ್ರತಿಜ್ಞೆಯ ಮೇರೆಗೆ ಪ್ರಮಾಣಿಕೃತ
ಹೇಳಿಕೆ ಪಡೆದುಕೊಳ್ಳಲಾಯಿತು
ದಿನಾಂಕಃ 18.11.2019

| | | |
|---|---|---|
| ಹೆಸರು | ಃ | ನಜೀರ ಅಹ್ಮದ ಸೈಯದ |
| ತಂದೆ ಹೆಸರು | ಃ | ಮದನಸಾಬ |
| ವಯಸ್ಸು | ಃ | 64-ವರ್ಷ |
| ಉದ್ಯೋಗ | ಃ | ನಿವೃತ್ತ ಎ ಎಸ್ ಐ |
| ವಾಸಸ್ಥಳ | ಃ | ಅಫಜಲಪೂರ |

ಮುಖ್ಯ ವಿಚಾರಣೆಃ ಎಪಿಪಿ ಯವರಿಂದ

ದಿನಾಂಕ 12.12.2010 ರಿಂದ ಡಿಸೆಂಬರ್ ರವರೆಗೆ ಹೆಚ್ ಸಿ ಮತ್ತು ನಂತರ ಎಎಸ್ ಐ ಎಂದು ಕರ್ತವ್ಯ ನಿರ್ವಹಿಸಿದ್ದೇನೆ. ದಿನಾಂಕ 22.12.2010 ರಂದು ಠಾಣೆಯ ಕರ್ತವ್ಯದಲ್ಲಿದ್ದಾಗ ಚಾಸಾ-1 ರವರು ಹಾಜರಾಗಿ ಫಿರ್ಯಾದಿ ಸಲ್ಲಿಸಿದ್ದು, ಸದರಿ ಫಿರ್ಯಾದಿಯ ಆಧಾರದ ಮೇಲಿಂದ ಠಾಣಾ ಗುನ್ನೆ ನಂ.181/2010 ಎಂದು ದಾಖಲಿಸಿಕೊಂಡು ಪ್ರ.ವ.ವ. ನ್ನು ನ್ಯಾಯಾಲಯಕ್ಕೆ ಮತ್ತು ಅದರ ಪ್ರತಿಯನ್ನು ನಮ್ಮ ಮೇಲಾಧಿಕಾರಿಗಳಿಗೆ ಕಳುಹಿಸಿಕೊಟ್ಟಿರುತ್ತೇನೆ. ಸದರಿ ಫಿರ್ಯಾದಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-2 ಎಂದು ಅದರ ಮೇಲಿನ ಸಾಕ್ಷಿ ಸಹಿಯನ್ನು ನಿಪಿ-2 ಎ ಎಂದು ಗುರುತಿಸಲಾಯಿತು. ಸಾಕ್ಷಿ ಪ್ರ.ವ.ವ. ನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-3 ಎಂದು, ಅದರ ಮೇಲಿನ ಸಾಕ್ಷಿ ಸಹಿಯನ್ನು ನಿಪಿ-3 ಎ ಎಂದು ಗುರುತಿಸಲಾಯಿತು.

ದಿನಾಂಕ 23.12.2010 ರಂದು ಚಾಸಾ-9 ರವರು ತೋರಿಸಿದ ಘಟನಾ ಸ್ಥಳವನ್ನು ಚಾಸಾ-2 ಮತ್ತು 3 ರವರ ಸಮಕ್ಷಮ ಪಂಚನಾಮೆ ಮಾಡಿರುತ್ತೇನೆ. ಸಾಕ್ಷಿ ಪಂಚನಾಮೆಯನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-1 ಎಂದು ಗುರುತಿಸಿದ್ದು ಸಾಕ್ಷಿ ಸಹಿಯನ್ನು ನಿಪಿ-1 ಸಿ ಎಂದು ಗುರುತಿಸಲಾಯಿತು. ಘಟನೆ ಕುರಿತು

ಚಾಸಾ-6 ರಿಂದ 8 ರವರ ಹೇಳಿಕೆ ಪಡೆದಿರುತ್ತೇನೆ. ಪ್ರಕರಣದ ಮುಂದಿನ ತನಿಖೆಯನ್ನು ಚಾಸಾ-19 ರವರು ವಹಿಸಿಕೊಂಡಿರುತ್ತಾರೆ.

ಪಾಟಿ ಸವಾಲುಃ ಆರೋಪಿ ಪರ ಶ್ರೀ ಪಿ ಬಿ ಪಿ ವಕೀಲರಿಂದ

ದಿನಾಂಕ 22.12.2010 ರಂದು ಠಾಣೆಯ ಕರ್ತವ್ಯದಲ್ಲಿದ್ದಾಗ ಚಾಸಾ-1 ರವರು ಹಾಜರಾಗಿ ಪಿರ್ಯಾದಿ ಸಲ್ಲಿಸಿದ್ದು, ಸದರಿ ಪಿರ್ಯಾದಿಯ ಆಧಾರದ ಮೇಲಿಂದ ಠಾಣಾ ಗುನ್ನೆ ನಂ.181/2010 ಎಂದು ದಾಖಲಿಸಿಕೊಂಡು ದಿನಾಂಕ 23.12.2010 ರಂದು ಚಾಸಾ-9 ರವರು ತೋರಿಸಿದ ಘಟನಾ ಸ್ಥಳವನ್ನು ಚಾಸಾ-2 ಮತ್ತು 3 ರವರ ಸಮಕ್ಷಮ ಪಂಚನಾಮೆ ಮಾಡಿ ಘಟನೆ ಕುರಿತು ಚಾಸಾ-6 ರಿಂದ 8 ರವರ ಹೇಳಿಕೆ ಪಡೆದಿರುತ್ತೇನೆ ಎಂದು ಸುಳ್ಳು ಹೇಳುತ್ತಿರುವೆ ಎಂದರೆ ಸರಿಯಲ್ಲ. ಆರೋಪಿ ಯಾವುದೇ ತಪ್ಪು ಮಾಡದಿದ್ದರೂ ಚಾಸಾ-1 ರವರ ಮಾತು ಕೇಳಿಕೊಂಡು ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷಿ ಹೇಳುತ್ತಿರುವೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೆ ಸರಿ ಇದೆ

ಪ್ರ.ದ.ನ್ಯಾ. ದಂಡಾಧಿಕಾರಿಗಳು
ಅಫಜಲಪೂರ

<u>ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ</u>
<u>ಅಫಜಲಪೂರ</u>

ಸಿಸಿ ನಂ.196/2014

ಚಾಸಾ-18 ಪ್ರಾಸಾ-7

ಸತ್ಯ ಪ್ರತಿಜ್ಞೆಯ ಮೇರೆಗೆ ಪ್ರಮಾಣಿಕೃತ
ಹೇಳಿಕೆ ಪಡೆದುಕೊಳ್ಳಲಾಯಿತು
ದಿನಾಂಕಃ 18.11.2019

| | | |
|---|---|---|
| ಹೆಸರು | ಃ | ಮಲಕಪ್ಪ ಮುದೋಡಗಿ |
| ತಂದೆ ಹೆಸರು | ಃ | ಬಸಪ್ಪ |
| ವಯಸ್ಸು | ಃ | 68-ವರ್ಷ |
| ಉದ್ಯೋಗ | ಃ | ನಿವೃತ್ತ ಹೆಚ್ ಸಿ |
| ವಾಸಸ್ಥಳ | ಃ | ಬೆಂಗಳೂರು |

ಮುಖ್ಯ ವಿಚಾರಣೆಃ ಎಪಿಪಿ ಯವರಿಂದ

2011 ರಲ್ಲಿ ಅಫಜಲಪೂರ ಠಾಣೆಯಲ್ಲಿ ಹೆಚ್ ಸಿ ಎಂದು ಕರ್ತವ್ಯ ನಿರ್ವಹಿಸಿದ್ದೇನೆ. ದಿನಾಂಕ 02.04.2011 ರಂದು ವಾಹನ ಸಂ.ಕೆಎ-25/ಬಿ-2247 ನೇದ್ದರ ಆರ್ ಟಿ ಒ ಪುಣೆಯಿಂದ Form No.15 ನ್ನು ಪಡೆದು ಮೇಲಾಧಿಕಾರಿಗಳಿಗೆ ನೀಡಿರುತ್ತೇನೆ.

ಪಾಟಿ ಸವಾಲುಃ ಆರೋಪಿ ಪರ ಶ್ರೀ ಪಿ ಬಿ ಪಿ ವಕೀಲರಿಂದ

ದಿನಾಂಕ 02.04.2011 ರಂದು ವಾಹನ ಸಂ.ಕೆಎ-25/ಬಿ-2247 ನೇದ್ದರ ಆರ್ ಟಿ ಒ ಪುಣೆಯಿಂದ Form No.15 ನ್ನು ಪಡೆದು ಮೇಲಾಧಿಕಾರಿಗಳಿಗೆ ನೀಡಿರುತ್ತೇನೆ ಎಂದು ಸುಳ್ಳು ಹೇಳುತ್ತಿರುವೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.
(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೆ ಸರಿ ಇದೆ

ಪ್ರ.ದ.ನ್ಯಾ. ದಂಡಾಧಿಕಾರಿಗಳು
ಅಫಜಲಪೂರ